UASB Library
Newspaper Clippings
Tuesday 18-10-2022 Pg .1
Jai Kisan

ಆಹಾರ ಸುಸ್ಥಿರತೆ ನಿರ್ಮಾಣ ಅಗತ್ಯ: ಕುಲಪತಿ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಕೋವಿಡ್ ಹಾಗೂ ರಷ್ಯಾ-ಉಕ್ರೇನ್ ಯುದ್ಧಗಳು ಆಹಾರ ವ್ಯವಸ್ಥೆ ಕುಸಿತಕ್ಕೆ ಕಾರಣವಾಗುತ್ತಿರುವುದರಿಂದ ದೇಶವು ದೀರ್ಘಾವಧಿಯಲ್ಲಿ ಅಂತರ್ಗತ ಆರ್ಥಿಕ ಬೆಳವಣಿಗೆ ಮತ್ತು ಸಮಗ್ರ ಪರಿಹಾರವನ್ನು ಕಂಡುಕೊಳ್ಳಬೇಕು. ಕೃಷಿಗೆ ಹೆಚ್ಚು ಆದ್ಯತೆ ನೀಡಿ ಆಧುನಿಕ ತಾಂತ್ರಿಕತೆಗಳ ಅಳವಡಿಕೆಯಿಂದ ಸದಾ ಹಸಿರು ಕ್ರಾಂತಿಯತ್ತ ಮುನ್ನುಗ್ಗುವ ಅಗತ್ಯವಿದೆ ಎಂದು ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಕುಲಪತಿ ಕೆ.ಸಿ.ನಾರಾಯಣಸ್ವಾಮಿ ಹೇಳಿದರು.



ಕೃಷಿ ವಿಶ್ವವಿದ್ಯಾಲಯ, ಬೆಂಗಳೂರಿನ ರೈತ ತರಬೇತಿ ಸಂಸ್ಥೆ ಮತ್ತು ಸಿಬ್ಬಂದಿ ತರಬೇತಿ ಘಟಕ ಸೋಮವಾರ ಆಯೋಜಿಸಿದ್ದ 'ವಿಶ್ವ ಆಹಾರ ದಿನಾಚರಣೆ-2022' ಉದ್ಘಾಟಿಸಿ ಮಾತನಾಡಿದ ಅವರು, ಪ್ರತಿಯೊಬ್ಬರೂ ತಾವಿರುವಲ್ಲೆ ಪೌಷ್ಟಿಕ ಆಹಾರವನ್ನು ಪಡೆಯುವ ಸುಸ್ಥಿರ ಸ್ಥಿತಿ ನಿರ್ಮಾಣವಾಗಬೇಕು. ಪೌಷ್ಟಿಕ ಆಹಾರ ಪಡೆಯುವಲ್ಲಿ ಯಾರೂ ಬಿಟ್ಟುಹೋಗಬಾರದು ಎಂಬ ಉದ್ದೇಶದಿಂದ ವಿಶ್ವ ಆಹಾರ ದಿನಾಚರಣೆಯನ್ನು ಈ ಬಾರಿ 'ಯಾರನ್ನೂ ಹಿಂದೆ ಬಿಡಬೇಡಿ' ಎಂಬ ಘೋಷವಾಕ್ಯದಡಿ ಆಚರಿಸಲಾಗುತ್ತಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ವಿಸ್ತರಣಾ ನಿರ್ದೇಶಕ ಡಾ. ಕೆ.ನಾರಾಯಣಗೌಡ ಮಾತನಾಡಿ, ಕೇವಲ ಆಹಾರ ಉತ್ಪಾದನೆಯನ್ನು ಮಾತ್ರ ಹೆಚ್ಚಿಸಿದರೆ ಸಾಲದು. ಅದು ಸಮರ್ಪಕವಾಗಿ ಸಮನಾಗಿ ಹಂಚಿಕೆಯಾದಾಗ ಮಾತ್ರ ಹಸಿವಿನ ಸಮಸ್ಯೆ ನೀಗುತ್ತದೆ ಎಂದರು.

ಬಾಗಲಕೋಟೆ ಪ್ರಾದೇಶಿಕ ತೋಟಗಾರಿಕೆ ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರದ ಡಾ.ಎಸ್.ಎಲ್.ಜಗದೀಶ್, ರೈತ ತರಬೇತಿ ಸಂಸ್ಥೆಯ ಮುಖ್ಯ ಬೋಧಕ ಡಾ.ವಿ.ಎಲ್. ಮಧುಪ್ರಸಾದ್, ತರಬೇತಿ ಸಂಯೋಜಕ ಡಾ। ಕೆ. ಶಿವರಾಮು ಸೇರಿ ಇದ್ದರು.

18-10-2022
Kannadaprbha Pg 03

18-10-2022
S-karnataka Pg 02

ಆಹಾರ ಸೇವನೆ ಮೂಲಭೂತ ಹಕ್ಕು

ಬೆಂಗಳೂರು: ಆಹಾರ ಸೇವಿಸುವುದು ಮಾನವನ ಮೂಲಭೂತ ಹಕ್ಕುಗಳಲ್ಲಿ ಒಂದು. ಭೂಮಿ ಮೇಲಿನ ಪ್ರತಿಯೊಬ್ಬರಿಗೂ ಸಾಕಷ್ಟು ಆಹಾರ ಸೇವಿಸುವ ಹಕ್ಕಿದೆ ಎಂದು ಕೃಷಿ ವಿವಿ ಕುಲಪತಿ ಡಾ.ಕೆ.ಸಿ.ನಾರಾಯಣಸ್ವಾಮಿ ತಿಳಿಸಿದರು.

ಬೆಂ.ಕೃಷಿ ವಿಶ್ವವಿದ್ಯಾನಿಲಯ, ರೈತ ತರಬೇತಿ ಸಂಸ್ಥೆ ಮತ್ತು ಸಿಬ್ಬಂದಿ ತರಬೇತಿ ಘಟಕದ ಸಂಯುಕ್ತಾಶ್ರಯದಲ್ಲಿ ವಿಶ್ವ ಆಹಾರ ದಿನಾಚರಣೆ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಅವರು, ಯಾವುದೇ ವ್ಯಕ್ತಿ ಅಪೌಷ್ಟಿಕ ಅಥವಾ ಹಸಿವಿನಿಂದ ಬಳಲಬಾರದು ಎಂಬುದು ಮುಖ್ಯ ಉದ್ದೇಶವಾಗಿದ್ದು 'ಯಾರನ್ನೂ ಹಿಂದೆ ಬಿಡಬೇಡಿ' ಎಂಬುದು ಈ ವರ್ಷದ ಘೋಷವಾಕ್ಯವಾಗಿದೆ ಎಂದರು.

ವಿಶ್ವದಾದ್ಯಂತ ಸುಮಾರು 3.1 ಶತಕೋಟಿ ಜನರಿಗೆ ಉತ್ತಮ ಆಹಾರ ದೊರಕುತ್ತಿಲ್ಲ. ಸುಮಾರು 828 ಮಿಲಿಯನ್ ಜನರು ಹಸಿವಿನಿಂದ ಬಳಲುತ್ತಿದ್ದಾರೆ. 2019 ರಿಂದ ಕೊರೊನಾನಂತಹ ಸಾಂಕ್ರಾಮಿಕ ರೋಗದ



ಬೆಂ.ಕೃಷಿ ವಿವಿ, ರೈತ ತರಬೇತಿ ಸಂಸ್ಥೆ ಮತ್ತು ಸಿಬ್ಬಂದಿ ತರಬೇತಿ ಘಟಕದ ಸಂಯುಕ್ತಾಶ್ರಯದಲ್ಲಿ ವಿಶ್ವ ಆಹಾರ ದಿನಾಚರಣೆಯನ್ನು ಆಯೋಜಿಸಲಾಗಿತ್ತು.

ಪರಿಣಾಮವಾಗಿ ಹಸಿವನ್ನು ಅನುಭವಿಸುವ ಜನರ ಸಂಖ್ಯೆ 100 ಮಿಲಿಯನ್‌ಗಿಂತಲೂ ಅಧಿಕವಾಗಿದೆ. ಆದ್ದರಿಂದ ಆಹಾರ ಉತ್ಪಾದನೆ, ಉತ್ಪಾದಕತೆ ಹಾಗೂ ಸುಸ್ಥಿರ ಬೆಳವಣಿಗೆಗೆ ಒತ್ತು ನೀಡಿ ಆರೋಗ್ಯಯುತ ಪೋಷಣೆ, ಪರಿಣಾಮಕಾರಿ ಪರಿಸರ ಮತ್ತು ಉತ್ತಮ ಜೀವನದೊಂದಿಗೆ ಜಾಗತೀಕರಣಗೊಂಡ ಪ್ರಪಂಚದಲ್ಲಿ ನಾವು ಮುನ್ನುಗ್ಗಬೇಕಾಗಿದೆ ಎಂದು ತಿಳಿಸಿದರು.

ಕೃಷಿ ವಿವಿಯ ವಿಸ್ತರಣಾ ನಿರ್ದೇಶಕ ಡಾ.ಕೆ.ನಾರಾಯಣ ಗೌಡ ಮಾತನಾಡಿ, ಕೇವಲ ಆಹಾರ ಉತ್ಪಾದನೆ ಮಾತ್ರ ಹೆಚ್ಚಿಸಿದರೆ ಸಾಲದು. ಅದು ಸಮರ್ಪಕವಾಗಿ ಸಮನಾಗಿ ಹಂಚಿಕೆಯಾದಾಗ ಮಾತ್ರ ದೇಶ ರಾಮರಾಜ್ಯವಾಗುವುದು ಎಂದು ಅಭಿಪ್ರಾಯಪಟ್ಟರು. ಡಾ.ಎಸ್.ಎಲ್. ಜಗದೀಶ್, ಡಾ: ವಿ.ಎಲ್. ಮಧುಪ್ರಸಾದ್, ಡಾ: ಕೆ.ಶಿವರಾಮು, ಡಾ. ಬನು ದೇಶಪಾಂಡೆ ಮತ್ತಿತರರಿದ್ದರು.

ರೈತರಿಗೆ ಒಂದೇ ಕಡೆ ಎಲ್ಲ ಸೌಲಭ್ಯ:600 ಕಿಸಾನ್ ಕೇಂದ್ರ ಆರಂಭ

ಮೊದಲ ಪುಟದಿಂದ

ಸದ್ಯ ದೇಶದಲ್ಲಿ 766 ಜಿಲ್ಲೆಗಳಿದ್ದು ಇದೀಗ 600 ಕೇಂದ್ರಗಳು ಉದ್ಘಾಟನೆಯಾಗುವ ಮೂಲಕ ಬಹುತೇಕ ಜಿಲ್ಲೆಗಳಲ್ಲಿ ಕಿಸಾನ್ ಸಮೃದ್ಧಿ ಕೇಂದ್ರ ಆರಂಭಗೊಂಡಂತೆ ಆಗಿದೆ.

ಈ ಎರಡು ಸುಧಾರಣೆಗಳು ದೇಶದಲ್ಲಿ ರಸಗೊಬ್ಬರ ಪೂರೈಕೆ ಹಾಗೂ ರೈತರ ಬದುಕನ್ನು ಉತ್ತಮಗೊಳಿಸುವ ಎರಡು ಮಹತ್ವಾಕಾಂಕ್ಷಿ ಕೃಷಿ ಸುಧಾರಣೆಗಳು ಎಂದು ಪ್ರಧಾನಿ ಮೋದಿ ಬಣ್ಣಿಸಿದರು.

ಕಿಸಾನ್ ಸಮೃದ್ಧಿ ಕೇಂದ್ರ: ರೈತರಿಗೆ ಒಂದೇ ಸೂರಿನಡಿ ರಸಗೊಬ್ಬರಗಳು, ಬಿತ್ತನೆ ಬೀಜ, ಕೃಷಿ ಉಪಕರಣಗಳು, ಮಣ್ಣಿನ ಪರೀಕ್ಷೆ ಸೇವೆ, ಸರ್ಕಾರಿ ಯೋಜನೆಗಳ ಕುರಿತು ಮಾಹಿತಿ ನೀಡುವ ಕಿಸಾನ್ ಸಮೃದ್ಧಿ ಕೇಂದ್ರಗಳನ್ನು ಪ್ರಧಾನಿ ಮೋದಿ ಉದ್ಘಾಟಿಸಿದರು. ಮೊದಲಿಗೆ ಇಂತಹ 600 ಕೇಂದ್ರಗಳು ದೇಶಾದ್ಯಂತ ಆರಂಭವಾಗಲಿವೆ. ಕ್ರಮೇಣ ದೇಶದೆಲ್ಲೆಡೆ ಇರುವ 3.25 ಲಕ್ಷ ರಸಗೊಬ್ಬರ ಮಾರಾಟ ಮಳಿಗೆಗಳನ್ನು ಕಿಸಾನ್ ಸಮೃದ್ಧಿ ಕೇಂದ್ರವಾಗಿ ರೂಪಾಂತರಗೊಳಿಸಲಾಗುವುದು ಎಂದು ಮೋದಿ ಪ್ರಕಟಿಸಿದರು.

ಭಾರತ್ ಯೂರಿಯಾ: ಕೇಂದ್ರ ಸರ್ಕಾರದಿಂದ ಯೂರಿಯಾ ಹಾಗೂ ಇನ್ನಿತರ ರಸಗೊಬ್ಬರಗಳಿಗೆ ಭಾರಿ ಪ್ರಮಾಣದಲ್ಲಿ ಸಬ್ಸಿಡಿ ಪಡೆಯುವ ಖಾಸಗಿ ಕಂಪನಿಗಳು ಇಷ್ಟು ದಿನ ತಮ್ಮದೇ ಬ್ರ್ಯಾಂಡ್‌ನಡಿ ಬೇರೆ ಬೇರೆ ಹೆಸರಿನಲ್ಲಿ ರಸಗೊಬ್ಬರಗಳನ್ನು ರೈತರಿಗೆ ಮಾರಾಟ ಮಾಡುತ್ತಿದ್ದವು. ಇನ್ನುಮುಂದೆ ಅವು 'ಭಾರತ್' ಎಂಬ ಒಂದೇ ಬ್ರ್ಯಾಂಡ್‌ನಡಿ ರಸಗೊಬ್ಬರ ಮಾರಾಟ ಮಾಡುವುದು 'ಒಂದು ದೇಶ, ಒಂದು ರಸಗೊಬ್ಬರ' ಯೋಜನೆಯೆಂದೇ ಹೆಸರಾಗಿರುವ 'ಪ್ರಧಾನ ಮಂತ್ರಿ ಭಾರತೀಯ ಜನ ಉರ್ವಾರುಕ ಪರಿಯೋಜನಾ' ಅಡಿಯಲ್ಲಿ ಕಡ್ಡಾಯವಾಗಿದೆ. ಮೊದಲಿಗೆ ಭಾರತ್ ಹೆಸರಿನ ಯೂರಿಯಾ ಬಿಡುಗಡೆ ಮಾಡಲಾಗಿದ್ದು, ಶೀಘ್ರದಲ್ಲೇ ಡಿಎಪಿ ಹಾಗೂ ಇನ್ನಿತರ ರಸಗೊಬ್ಬರಗಳು ಕೂಡ ಭಾರತ್ ಹೆಸರಿನಲ್ಲೇ ಬರಲಿವೆ.

ಕೃಷಿ ಹಾಗೂ ರಸಗೊಬ್ಬರ ಸಚಿವಾಲಯಗಳು ಜಂಟಿಯಾಗಿ ಆಯೋಜಿಸಿದ ಸಮ್ಮೇಳನದಲ್ಲಿ ಇದೇ ವೇಳೆ ಮೋದಿ ಸಾಪ್ತಾಹಿಕ ಅಂತಾರಾಷ್ಟ್ರೀಯ ರಸಗೊಬ್ಬರ ಇ-ನಿಯತಕಾಲಿಕ 'ಇಂಡಿಯನ್ ಎಡ್ಜ್' ಕೂಡ ಬಿಡುಗಡೆ ಮಾಡಿದರು.

ಉತ್ತಮ ಗುಣಮಟ್ಟದ ಗೊಬ್ಬರ ಲಭ್ಯ: ಬೇರೆ ಬೇರೆ ಬ್ರ್ಯಾಂಡ್‌ನ ರಸಗೊಬ್ಬರಗಳನ್ನು ಬೇರೆ ಬೇರೆ ಕಂಪನಿಗಳು ಪೈಪೋಟಿಯ ಮೇಲೆ ಮಾರುಕಟ್ಟೆ ಮಾಡುತ್ತಿದ್ದುದರಿಂದ ರೈತರು ಯಾವುದನ್ನು ಖರೀದಿಸಬೇಕು ಎಂಬ ಗೊಂದಲದಲ್ಲಿದ್ದರು. ಈ ಪೈಪೋಟಿಯಲ್ಲಿ ಗುಣಮಟ್ಟ ಕುಸಿಯುತ್ತಿತ್ತು. ಏಕೆಂದರೆ ಅಧಿಕ ಕಮಿಷನ್ ಆಸೆಗೆ ಚಿಲ್ಲರೆ ಮಾರಾಟಗಾರರು ಯಾವ ರಸಗೊಬ್ಬರವನ್ನು ಬೇಕಾದರೂ ಮಾರಾಟ ಮಾಡುತ್ತಿದ್ದರು. ಇನ್ನುಮುಂದೆ ಭಾರತ್ ಬ್ರ್ಯಾಂಡ್ ಅಡಿಯಲ್ಲಿ ಆ ಸಮಸ್ಯೆ ಇರುವುದಿಲ್ಲ. ಹೀಗಾಗಿ ರೈತರಿಗೆ ಅನುಕೂಲವಾಗಲಿದೆ ಎಂದು ಮೋದಿ ಹೇಳಿದರು.

18-08-2022
Kannadaprbha Pg 14

18-08-2022
Kannadaprbha Pg 01

ರೈತರಿಗೆ ಒಂದೇ ಕಡೆ ಎಲ್ಲ ಸೌಲಭ್ಯ

ದೇಶಾದ್ಯಂತ 600 ಕಿಸಾನ್ ಸಮೃದ್ಧಿ ಕೇಂದ್ರಗಳಿಗೆ ಮೋದಿ ಚಾಲನೆ

'ಒಂದು ದೇಶ, ಒಂದು ರಸಗೊಬ್ಬರ' ಯೋಜನೆಯೂ ಲೋಕಾರ್ಪಣೆ

ನವದೆಹಲಿ: ದೇಶಾದ್ಯಂತ ಯೂರಿಯಾವನ್ನು 'ಭಾರತ್' ಎಂಬ ಒಂದೇ ಬ್ರ್ಯಾಂಡ್‌ನಡಿ ಮಾರಾಟ ಮಾಡುವ 'ಒಂದು ದೇಶ, ಒಂದು ರಸಗೊಬ್ಬರ' ಯೋಜನೆಯನ್ನು ಪ್ರಧಾನಿ ನರೇಂದ್ರ ಮೋದಿ ಲೋಕಾರ್ಪಣೆಗೊಳಿಸಿದರು. ಇದೇ ವೇಳೆ, ರೈತರಿಗೆ ಗೊಬ್ಬರ, ಬೀಜ ಮಾರಾಟದಿಂದ ಹಿಡಿದು ಮಣ್ಣಿನ ಪರೀಕ್ಷೆಯವರೆಗೆ ಎಲ್ಲಾ ಅಗತ್ಯ ಸೇವೆಗಳನ್ನೂ ಒಂದೇ ಸೂರಿನಡಿ ನೀಡುವ 600 ಕಿಸಾನ್ ಸಮೃದ್ಧಿ ಕೇಂದ್ರಗಳನ್ನೂ ಪ್ರಧಾನಿ ಉದ್ಘಾಟಿಸಿದರು. 14



ಏನಿದು ಕಿಸಾನ್ ಸಮೃದ್ಧಿ ಕೇಂದ್ರ?

- ಒಂದೇ ಸೂರಿನಡಿ ರೈತರಿಗೆ ಕೃಷಿಗೆ ಸಂಬಂಧಿಸಿದ ವಿವಿಧ ಸೌಲಭ್ಯ ಒದಗಿಸುವ ಕೇಂದ್ರಗಳು
- ರಸಗೊಬ್ಬರ, ಬಿತ್ತನೆ ಬೀಜ, ಕೃಷಿ ಉಪಕರಣಗಳು ಕಿಸಾನ್ ಸಮೃದ್ಧಿ ಕೇಂದ್ರಗಳಲ್ಲಿ ಲಭ್ಯ
- ಮಣ್ಣು ಪರೀಕ್ಷಾ ಸೇವೆ, ಸರ್ಕಾರಿ ಯೋಜನೆಗಳ ಕುರಿತಂತೆಯೂ ಮಾಹಿತಿ ನೀಡಿಕೆ
- ದೇಶದಲ್ಲಿ 766 ಜಿಲ್ಲೆಗಳಿದ್ದು, ಈ ಪೈಕಿ 600 ಕೇಂದ್ರಗಳನ್ನು ಸ್ಥಾಪಿಸುಸುವುದಾಗಿ ಘೋಷಣೆ
- ಹೀಗಾಗಿ ದೇಶದ ಬಹುತೇಕ ಜಿಲ್ಲೆಗಳಲ್ಲಿ ಕಿಸಾನ್ ಕೇಂದ್ರ ಕಾರ್ಯಾರಂಭ

ರಾಜ್ಯದ 50 ಲಕ್ಷ ಸೇರಿ 8 ಕೋಟಿ ಕೃಷಿಕರಿಗೆ ಕಿಸಾನ್ ಸಮ್ಮಾನ್ ನಿಧಿ

ನವದೆಹಲಿ: ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ನಿಧಿಯ 12ನೇ ಕಂತನ್ನು ಪ್ರಧಾನಿ ನರೇಂದ್ರ ಮೋದಿ ಸೋಮವಾರ ಬಿಡುಗಡೆ ಮಾಡಿದರು. ಕರ್ನಾಟಕದ 50.36 ಲಕ್ಷ ರೈತರಿಗೆ 1007 ಕೋಟಿ ರು. ಸೇರಿದಂತೆ ದೇಶಾದ್ಯಂತ 8 ಕೋಟಿ ರೈತರಿಗೆ ತಲಾ 2 ಸಾವಿರ ರು.ನಂತೆ ₹16000 ಕೋಟಿ ಹಣ ಬ್ಯಾಂಕ್ ಖಾತೆಗಳಿಗೆ ಕ್ಷಣಾರ್ಧದಲ್ಲಿ ವರ್ಗಾವಣೆಯಾಯಿತು. ವಿವರ 15

18-08-2022
S-Karnataka Pg 06

ಕಬ್ಬು ಬೆಳೆಗಾರರ ಸಂರಕ್ಷಣೆ-ಸರ್ಕಾರದ ಹೊಣೆ

ರಾಜ್ಯಾದ್ಯಂತ ಕಬ್ಬು ಬೆಳೆ ಕಟಾವಿಗೆ ಬಂದಿರುವ ಈ ಸಮಯದಲ್ಲಿ ಬೆಳೆಗಾರರ ಬಾಕಿ ವಿಷಯ ಇನ್ನೂ ಇತ್ಯರ್ಥವಾಗದಿರುವ ಜೊತೆಗೆ, ದರ ನಿಗದಿಯಾಗದೇ ಸಮಸ್ಯೆಯಾಗಿರುವುದು ಸಹಜವಾಗಿ ಆತಂಕ ಮೂಡಿಸಿರುವ ಸಂಗತಿ. ಈ ಸಂಬಂಧ ಸಕ್ಕರೆ ಖಾತೆ ಸಚಿವ ಶಂಕರ ಪಾಟೀಲ ಮುನೇನಕೊಪ್ಪ ಅವರ ಅಧ್ಯಕ್ಷತೆಯ ಸಭೆಯಲ್ಲಿ ವ್ಯಕ್ತವಾಗಿರುವ ಬೆಳೆಗಾರರ ಕಳವಳಕಡೆಗಣಿಸುವಂಥದ್ದಲ್ಲ.

ರಾಜ್ಯ ಸಲಹಾ ದರವಾಗಿ (ಎಸ್‌ಎಪಿ) ಕನಿಷ್ಟ 5,500 ರೂಪಾಯಿ ಪ್ರತಿ ಟನ್ನಿಗೆ ಸರ್ಕಾರ ನಿಗದಿ ಮಾಡಬೇಕು ಹಾಗೂ ಕಾರ್ಖಾನೆಗಳಿಂದ ಬಾಕಿಯನ್ನು ಕೂಡಲೇ ಪಾವತಿಯಾಗುವಂತೆ ಮಾಡಬೇಕು ಎಂಬ ರೈತರ ಒಕ್ಕೊರಲ ಆಗ್ರಹಕ್ಕೆ ಸ್ಪಂದಿಸಲೇಬೇಕಾದುದು ಈಗಿನ ಅಗತ್ಯ. ಬೇರೆ ರಾಜ್ಯಗಳಲ್ಲಿ ಕನಿಷ್ಟ ಸಾಮಾನ್ಯ ದರ ಕರ್ನಾಟಕಕ್ಕಿಂತ ಕಡಿಮೆ ಎಂಬ ವಾದವನ್ನು ಮುಂದೊಡ್ಡುವುದು ಸರಿಯಲ್ಲ.

ಪಂಜಾಬಿನಲ್ಲಿ ಈ ದರ ಪ್ರತಿ ಟನ್ನಿಗೆ 3,500, ಗುಜರಾತಿನಲ್ಲಿ 4,400 ಇದೆ ನಿಜ. ಆದರೆ ಕರ್ನಾಟಕದ ಕಬ್ಬು ಬೆಳೆಗಾರರ ಉತ್ಪಾದನಾ ವೆಚ್ಚ ಉಳಿದೆಡೆಗಿಂತ ಹೆಚ್ಚು. ಕಾರ್ಖಾನೆಗಳಿಂದ ಸಕಾಲಕ್ಕೆ ಹಣ ದೊರೆಯದೇ ಕಳೆದ ಕೆಲ ವರ್ಷಗಳಿಂದ ಅನುಭವಿಸುತ್ತಿರುವ ಆರ್ಥಿಕ ಸಂಕಷ್ಟಕ್ಕೆ, ಮಾಡಿರುವ ಸಾಲ ತೀರಿಸುವುದಕ್ಕೆ ಈಗ ಮುಂದೊಡ್ಡಿರುವ ದರದ ಬೇಡಿಕೆ ನ್ಯಾಯಸಮ್ಮತವೇ ಆಗಿದೆ.

ರಾಜ್ಯದ ಸಕ್ಕರೆ ಕಾರ್ಖಾನೆಗಳು ದರ ನಿಗದಿಯನ್ನು ಇನ್ನೂ ಮಾಡಿಲ್ಲ. ಜೊತೆಗೆ ಸಕಾಲಕ್ಕೆ ಬಾಕಿ ಪಾವತಿ ಮಾಡುತ್ತಿಲ್ಲ. ಕಾರ್ಖಾನೆಗಳ ಬಾಕಿ ಸಮಸ್ಯೆ ಇತ್ಯರ್ಥವಾಗಿದೆ ಎಂಬುದಾಗಿ ಸರ್ಕಾರ ಸಭೆಯಲ್ಲಿ ಹೇಳಿದ್ದರೂ, ಸಕಾಲಕ್ಕೆ ಕಬ್ಬು ನುರಿದ ಹಣ ಪಾವತಿಯಾಗುತ್ತಿಲ್ಲ ಎನ್ನುವುದು ರಾಜ್ಯದ ಕಬ್ಬು ಬೆಳೆಗಾರರ ಕಹಿ ಅನುಭವ. ಇದನ್ನು ಪರೋಕ್ಷವಾಗಿ ಒಪ್ಪಿಕೊಂಡಿರುವ ಸಚಿವರು, ಈಗ ಇವರೆಡೂ ಸಮಸ್ಯೆಗಳನ್ನು ಮುಖ್ಯಮಂತ್ರಿಗಳ ಅಂಗಳಕ್ಕೆ ವರ್ಗಾಯಿಸಿದ್ದಾರೆ.

ಆದರೆ ಮುಖ್ಯಮಂತ್ರಿಗಳ ಸಮ್ಮುಖದಲ್ಲಾದರೂ ಸಮಸ್ಯೆಗಳಿಗೆ ತುರ್ತು ಪರಿಹಾರ ದೊರಕಬೇಕಾಗಿದೆ. ಭರವಸೆ ಮಾತಿಗಷ್ಟೇ ಸೀಮಿತವಾಗಿ ಉಳಿಯದಂತೆ ಸರ್ಕಾರ ನೋಡಿಕೊಳ್ಳಬೇಕಾಗಿದೆ. ಏಕೆಂದರೆ ಎಷ್ಟೇ ಪ್ರಭಾವಿಗಳ ಕಾರ್ಖಾನೆಯಿದ್ದರೂ ಎಸ್‌ಎಪಿ ಅನ್ವಯ ಹಣ ಪಾವತಿಸಲು ಹಾಗೂ ಬರಬೇಕಾಗಿರುವ ಹಣ ಸಂದಾಯ ಆಗುವಂತೆ ನೋಡಿಕೊಳ್ಳಲು ಸಿದ್ಧ ಎಂಬ ಸರ್ಕಾರದ ಮಾತು ಇದು ಮೊದಲನೇ ಬಾರಿ ಕೇಳುತ್ತಿರುವುದೇನಲ್ಲ.

ಸದನದ ಒಳಗೆ ಹಾಗೂ ಹೊರಗೆ ಇದೇ ವಿಷಯವಾಗಿ ಸಾಕಷ್ಟು ಚರ್ಚೆಗಳಾಗಿವೆ. ಸಭೆಗಳು ನಡೆದು ಬೆಳೆಗಾರರಿಗೆ ಆಶ್ವಾಸನೆಗಳು ದೊರಕುತ್ತಲೇ ಇವೆ. ಮೊನ್ನೆಯ ಸಭೆಯೂ ಆಸಾಲಿಗೆ ಸೇರ್ಪಡೆಯಾಗದಿರಲಿ. ಈಗಾಗಲೇ ಕಬ್ಬು ಬೆಳೆಗಾರ ಕಂಗೆಟ್ಟು ಪ್ರತಿಭಟನೆಯ ಹಾದಿ ಹಿಡಿದು ತುಂಬ ದಿನಗಳಾಗಿವೆ. ಹಳಿಯಾಳದಲ್ಲಿ ಕಳೆದ ಇಪ್ಪತ್ತು ದಿನಗಳಿಂದ ಕಬ್ಬು ಬೆಳೆಗಾರರು ಸುರಿವ ಮಳೆಯನ್ನೂ ಲೆಕ್ಕಿಸದೇ ದರ ನಿಷ್ಕರ್ಷೆಗಾಗಿ ಧರಣಿ ನಡೆಸುತ್ತಿದ್ದಾರೆ.

ಕಬ್ಬು ಬೆಳೆಗಾರರ ಬಾಕಿಗೆ ಇನ್ನಾದರೂ ಮುಕ್ತಿ ದೊರೆಯದೇ ಇದ್ದರೆ ಇಂಥ ಪ್ರತಿಭಟನೆಗಳು ಅನೇಕ ಕಡೆ ನಡೆಯುವ ಸಾಧ್ಯತೆಯನ್ನು ತಳ್ಳಿ ಹಾಕುವಂತಿಲ್ಲ. ರೈತರ ಕೂಗನ್ನು ನಿರ್ಲಕ್ಷಿಸಿದರೆ, ರಾಜ್ಯಕ್ಕೆ ಸಿಹಿ ನೀಡುವ ಕಬ್ಬು ಬೆಳೆಗಾರ ಬೀದಿಗೆ ಬೀಳುವ ದಿನಗಳು ದೂರವಿಲ್ಲ. ಎರಡು ವರ್ಷಗಳ ನಂತರ ನಿರುಮ್ಮಳವಾಗಿ ನಾಡು ದೀಪಾವಳಿ ಆಚರಿಸಿ ಹಬ್ಬ ಮಾಡುವಾಗ, ಈ ಸಂಭ್ರಮಕ್ಕೆ ಕಾರಣವಾಗುವ ಬೆಳೆಗಾರ ನೋವಿನಲ್ಲಿ ಇರುವಂತಾಗಬಾರದು.

ರಾಜ್ಯದೆಲ್ಲೆಡೆ 70ಕ್ಕೂ ಹೆಚ್ಚು ಸಕ್ಕರೆ ಕಾರ್ಖಾನೆಗಳಿವೆ. ಕಿತ್ತೂರು ಪ್ರಾಂತ್ಯದಲ್ಲಿ ಇವುಗಳ ಸಂಖ್ಯೆ ಅತೀ ಹೆಚ್ಚು. ಉಳಿದಂತೆ ಕಬ್ಬು ನುರಿಯುವ ವಿಷಯದಲ್ಲಿ ಕಲ್ಯಾಣ ಮತ್ತು ಮೈಸೂರು ಭಾಗ ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನಗಳಲ್ಲಿವೆ. ಬೆಳಗಾವಿ ಅತ್ಯಧಿಕ ಸಕ್ಕರೆ ಕಾರ್ಖಾನೆಗಳಿರುವ ಜಿಲ್ಲೆ. ದೇಶದ ಸಕ್ಕರೆ



ಉತ್ಪಾದನೆಯಲ್ಲಿ ಕರ್ನಾಟಕ ಮೂರನೇ ಸ್ಥಾನದಲ್ಲಿದೆ. ಮಂಡ್ಯದ ಮೈಶುಗರ್ ಮಾತ್ರ ಈಗಿನ ಮಟ್ಟಿಗೆ ಸರ್ಕಾರಿ ಒಡೆತನದ್ದು. ಉಳಿದಂತೆ ಖಾಸಗಿಯವರು, ಅದರಲ್ಲೂ ವಿಶೇಷವಾಗಿ ರಾಜಕಾರಣಿಗಳ ಹಿಡಿತದಲ್ಲಿ ಇರುವ ಸಕ್ಕರೆ ಕಾರ್ಖಾನೆಗಳಿಂದಾಗಿ ಸಮಸ್ಯೆ ಉಲ್ಬಣವಾಗುತ್ತಲೇ ನಡೆದಿದೆ. ಇದರಿಂದಾಗಿ ಬೆಳೆಗಾರ ಸಂಕಷ್ಟಕ್ಕೆ ಈಡಾಗಿದ್ದಾನೆ.

ಎಲ್ಲೋ ಕೈಬೆರಳೆಣಿಕೆಯಷ್ಟು ಸಕ್ಕರೆ ಕಾರ್ಖಾನೆಗಳು ಕಬ್ಬು ಬೆಳೆಗಾರನ ಹಿತವನ್ನು ಸಂರಕ್ಷಣೆ ಮಾಡಿರುವುದನ್ನು ಹೊರತುಪಡಿಸಿದರೆ, ಸಮಸ್ಯೆ ಎಲ್ಲೆಡೆಯೂ ಇದೆ. ಮುಖ್ಯಮಂತ್ರಿಗಳು ತಮ್ಮ ರಾಜಕೀಯ ಒತ್ತಡ ಹಾಗೂ ಎದುರಾಗಲಿರುವ ಚುನಾವಣೆಯ ಬಿಸಿಯ ನಡುವೆಯೇ ಮೊದಲು ಇದನ್ನು ಪರಿಹರಿಸಬೇಕಾಗಿದೆ. ಇನ್ನೆರಡು ಅಥವಾ ಮೂರು ದಿನಗಳಲ್ಲಿ ಇದಕ್ಕೊಂದು ಶಾಶ್ವತ ಕ್ರಮವನ್ನು ತೆಗೆದುಕೊಳ್ಳದೇ ಇದ್ದರೆ ರಾಜ್ಯಾದ್ಯಂತ ರೈತ ಸಮುದಾಯ ಉದ್ವೇಗ-ಆತಂಕಗಳಿಗೆ ಒಳಗಾಗಲಿದೆ. ಕಬ್ಬು ನುರಿದ ಹಣ ಪಾವತಿಗೆ ಡಿಜಿಟಲ್ ತಂತ್ರಜ್ಞಾನ ಅಳವಡಿಸಿಕೊಳ್ಳಲು ಸರ್ಕಾರ ಮಾಡಿರುವ ನಿರ್ಧಾರದಿಂದ ಸಮಸ್ಯೆಗೆ ಸಾಕಷ್ಟು ಪರಿಹಾರ ದೊರೆಯಲಿದೆ ನಿಜ. ಆದರಿದು ಭವಿಷ್ಯದ ಸಿಹಿ ಸುದ್ದಿ. ತಕ್ಷಣ ಆಗಬೇಕಾದುದು ಬೆಳೆಗಾರರ ಸದ್ಯದ ಎರಡು ಬೇಡಿಕೆಗಳನ್ನು ಈಡೇರಿಸುವ ಕೆಲಸ ಎಂಬುದನ್ನು ಸರ್ಕಾರ ಗಮನಿಸಬೇಕು.

ರಾಜ್ಯದಲ್ಲಿ ಧಾರವಾಡ ಜಿಲ್ಲೆಯೊಂದರಲ್ಲೇ ಇನ್ನೂ ನಾಲ್ಕು ಕಬ್ಬಿನ ಕಾರ್ಖಾನೆಗಳನ್ನು ಸ್ಥಾಪಿಸುವ ಘೋಷಣೆ ಸಕಾಲಿಕ. ಕಬ್ಬು ಬೆಳೆ ಪ್ರದೇಶ ದಿನದಿಂದ ದಿನಕ್ಕೆ ವಿಸ್ತರಣೆಯಾಗುತ್ತಲೇ ಇರುವ ಈ ಸಂದರ್ಭದಲ್ಲಿ ಹೊಸ ಕಾರ್ಖಾನೆಗಳು ಅಗತ್ಯ. ಆದರೆ ಎಸ್‌ಎಪಿ ಅನ್ವಯ ಕಬ್ಬು ನುರಿದ ತಕ್ಷಣ ಹಣ ದೊರೆಯದೇ ಇದ್ದರೆ ಇದು ಖುಷಿಯ ಸಂಗತಿಯಂತೂ ಅಲ್ಲ. ಹೀಗಾಗಿ ಕಬ್ಬು ಬೆಳೆಗಾರರ ಹಿತಕ್ಕೆ ಬದ್ಧತೆಯನ್ನು ಮೌಖಿಕವಾಗಿ ವ್ಯಕ್ತಪಡಿಸುವುದಕ್ಕೆ ಸೀಮಿತಗೊಳಿಸಿಕೊಳ್ಳದೇ, ಇದನ್ನು ಕಾರ್ಯರೂಪದಲ್ಲಿ ತರುವುದು ಈಗ ಮುಖ್ಯಮಂತ್ರಿಗಳ ಮುಂದಿರುವ ದೊಡ್ಡ ಸವಾಲು. ಇದನ್ನು ಸ್ವೀಕರಿಸಿ ಕ್ರಮಕ್ಕೆ ಮುಂದಾಗದೇ ಇದ್ದರೆ ಅಮಾಯಕ ಬೆಳೆಗಾರ ರಸ್ತೆ ಪಾಲಾಗಲಿದ್ದಾನೆ. ಇದನ್ನು ತಪ್ಪಿಸುವುದು ನಾಗರಿಕ ಸರ್ಕಾರದ ಜವಾಬ್ದಾರಿ.

ಬೇಡಿಕೆಗಳ ಈಡೇರಿಕೆಗೆ ಐದು ದಿನಗಳ ಗಡುವನ್ನು ಬೆಳೆಗಾರರು ನೀಡಿದ್ದಾರೆ. ಇದು ಮೀರದಂತೆ ಸರ್ಕಾರ ಕ್ರಮ ತೆಗೆದುಕೊಂಡರೆ, ಸಕ್ಕರೆ ಕಾರ್ಖಾನೆಗಳ ಹಣಕಾಸು ವಿಷಯದಲ್ಲಿ ಆಧುನಿಕ ತಂತ್ರಜ್ಞಾನ ಅಳವಡಿಸಿಕೊಳ್ಳುವ ಹಾಗೂ ಹೊಸ ಸಕ್ಕರೆ ಕಾರ್ಖಾನೆಗಳನ್ನು ಸ್ಥಾಪಿಸುವ ನಿರ್ಧಾರಕ್ಕೆ ಅರ್ಥ ಬರಲಿದೆ. ದರ ನಿಗದಿ ಹಾಗೂ ಹಿಂಬಾಕಿಯ ಜೊತೆಗೆ ಸಾಗಣೆಯ ಸಮಸ್ಯೆಯೂ ರಾಜ್ಯದ ಬೆಳೆಗಾರನಿಗೆ ಎದುರಾಗಿದೆ. ಇಂತಹ ಸಮಸ್ಯೆಗಳನ್ನು ಬಹುತೇಕ ಈಡೇರಿಸಿಕೊಂಡಿರುವ ನೆರೆಯ ರಾಜ್ಯಗಳ ಮಾದರಿಯನ್ನು ಅಧ್ಯಯನ ಮಾಡಿ ಅಳವಡಿಸಿಕೊಳ್ಳುವುದು ಸೂಕ್ತ. ಈ ವಿಷಯದಲ್ಲಿ ಪ್ರತಿಷ್ಠೆಯನ್ನು ಬದಿಗಿಟ್ಟು ಬೆಳೆಗಾರನ ಸಹಾಯಕ್ಕೆ ಧಾವಿಸಬೇಕಾದುದು ಸರ್ಕಾರದ ಜವಾಬ್ದಾರಿ.

ಇವರಡು ಸಮಸ್ಯೆಗಳನ್ನು ಈಡೇರಿಸುವುದರ ಜೊತೆಗೆ, ಕಬ್ಬಿನ ಉಪ ಉತ್ಪನ್ನಗಳಾದ ಎಥಿನಾಲ್, ಕಬ್ಬಿನ ಸಿಪ್ಪೆಯಿಂದ ವಿದ್ಯುತ್ ಉತ್ಪಾದನೆ ಮೊದಲಾದವುಗಳಿಗೂ ಬೆಳೆಗಾರನಿಗೆ ನ್ಯಾಯಸಮ್ಮತ ಹಣ ದೊರೆಯುವಂತೆ ಸರ್ಕಾರ ನೀತಿಯೊಂದನ್ನು ರೂಪಿಸುವುದು ಈಗಿನ ಅಗತ್ಯ.

ಹೈನುಗಾರಿಕೆಯಿಂದ ಆರ್ಥಿಕ ಬಲ

'ಹೈನು- ಹೊನ್ನು ಕ್ಷೀರ ಪಥ ಜೀವನ ರಥ' ಸಮ್ಮೇಳನದಲ್ಲಿ ಗಣ್ಯರ ಅಭಿಮತ

■ ಏಕ ಸುದ್ದಿಲೋಕ ಧಾರವಾಡ

ರೈತ ಕುಟುಂಬದ ಆರ್ಥಿಕತೆ ಸುಧಾರಣೆಯಲ್ಲಿಮಹತ್ತರ ಪಾತ್ರವಹಿಸುತ್ತಿರುವ ಹೈನುಗಾರಿಕೆಯನ್ನು ಮತ್ತಷ್ಟು ಪ್ರೋತ್ಸಾಹಿಸುವ ಸದುದ್ದೇಶದಿಂದ 'ವಿಜಯ ಕರ್ನಾಟಕ' ಸೋಮವಾರ ಧಾರವಾಡದಲ್ಲಿ ಆಯೋಜಿಸಿದ್ದ 'ಹೈನು- ಹೊನ್ನು ಕ್ಷೀರ ಪಥ ಜೀವನ ರಥ' ಹೈನುಗಾರರ ಸಮ್ಮೇಳನ ಅತ್ಯಂತ ಯಶಸ್ವಿಯಾಗಿ ನಡೆಯಿತು.

ಧಾರವಾಡ, ಗದಗ ಮತ್ತು ಉತ್ತರ ಕನ್ನಡ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ (ದಾಮುಲ್) ಸಹಯೋಗದಲ್ಲಿ ಧಾರವಾಡದ ಕೆಎಂಎಫ್ ನಂದಿನಿ ಸಭಾಭವನದಲ್ಲಿ ನಡೆದ ಸಮ್ಮೇಳನದಲ್ಲಿ ಸಾಧಕ ಹಾಲು ಉತ್ಪಾದಕರು, ಅಧಿಕ ಹಸಿರು ಮೇವು ಉತ್ಪಾದಿಸಿದವರು, ಹೆಚ್ಚು ಪಶು ಆಹಾರ ಬಳಸಿದವರು ಹಾಗೂ ಮಾದರಿ ಹಾಲು ಉತ್ಪಾದಕ ಸಹಕಾರ ಸಂಘಗಳನ್ನು ಪುರಸ್ಕರಿಸಲಾಯಿತು.



ಧಾರವಾಡದಲ್ಲಿ ನಡೆದ ಏಕ ಹೈನು ಹೊನ್ನು ಸಮ್ಮೇಳನದಲ್ಲಿ ಧಾರವಾಡ, ಗದಗ, ಉತ್ತರಕನ್ನಡ ಜಿಲ್ಲೆಯ 12 ಸಾಧಕ ಹೈನುಗಾರರು ಹಾಗೂ 3 ಹಾಲು ಉತ್ಪಾದಕರ ಸಂಘಗಳನ್ನು ಗೌರವಿಸಲಾಯಿತು. ಮಾಜಿ ಸಿಎಂ ಜಗದೀಶ ಶೆಟ್ಟರ್, ಶಾಸಕ ಅಮೃತ ದೇಸಾಯಿ, ಒಕ್ಕೂಟದ ಅಧ್ಯಕ್ಷ ಶಂಕರ ಮುಗದ, ಎಂಡಿ ಡಾ.ಕೆ.ಎಂ.ಲೋಹಿತೇಶ್ವರ, ನಿರ್ದೇಶಕರು ಉಪಸ್ಥಿತರಿದ್ದರು.

ಹೈನೋದ್ಯಮಕ್ಕೆ ಉತ್ತೇಜನ

ಸಮಾರಂಭದಲ್ಲಿ ಪಾಲ್ಗೊಂಡ ಗಣ್ಯರು, ''ರೈತರು ಹೈನುಗಾರಿಕೆಯನ್ನು ಪ್ರಧಾನ ಕಸುಬಾಗಿಸಿಕೊಂಡರೆ ಸ್ವಾವಲಂಬನೆ ಕನಸು ಸಾಕಾರಗೊಳ್ಳಲಿದೆ. ಈ ನಿಟ್ಟಿನಲ್ಲಿ ಸರಕಾರವೂ ಹೈನೋದ್ಯಮಕ್ಕೆ ಉತ್ತೇಜನ ನೀಡುತ್ತಿದೆ. ಹೈನುಗಾರಿಕೆಯಿಂದ ರೈತರು ಆರ್ಥಿಕವಾಗಿ ಸಬಲರಾದರೆ, ದೇಶ ಹಾಗೂ ರಾಜ್ಯ ಆರ್ಥಿಕವಾಗಿ ಸುಧಾರಣೆ ಕಾಣಲಿದೆ,'' ಎಂಬ ಅಭಿಪ್ರಾಯ ವ್ಯಕ್ತಪಡಿಸಿದರು.



ರೈತರ ಹಬ್ಬದಂತೆ ಆಯೋಜನೆಗೊಂಡಿದ್ದ ಹೈನು ಹೊನ್ನು ಸಮ್ಮೇಳನದಲ್ಲಿ ಹೈನುಗಾರರು ಅತ್ಯಂತ ಉತ್ಸಾಹದಿಂದ ಪಾಲ್ಗೊಂಡಿದ್ದರು. ಹೈನೋದ್ಯಮ ಬಗ್ಗೆ 'ವಿಜಯ ಕರ್ನಾಟಕ'ದ ಕಳಕಳಿ ಕೊಂಡಾಡಿದರಲ್ಲದೇ, ಮೆಚ್ಚುಗೆ ವ್ಯಕ್ತಪಡಿಸಿದರು. ಇದಕ್ಕೂ ಪೂರ್ವ ಕಾರ್ಯಕ್ರಮಕ್ಕೆ ಆಗಮಿಸಿದ ಗಣ್ಯರನ್ನು ಡೊಳ್ಳು, ಕರಡಿ ಮಜಲಿನ ವಾದ್ಯದೊಂದಿಗೆ ವೇದಿಕೆವರೆಗೆ ಮೆರವಣಿಗೆ ಮೂಲಕ ಕರೆತರಲಾಯಿತು. ಈ ಸಂದರ್ಭದಲ್ಲಿ ಶಾಸಕರು, ಧಾರವಾಡ ಹಾಲು ಒಕ್ಕೂಟದ ಅಧ್ಯಕ್ಷರು, ನಿರ್ದೇಶಕರು, ಕೆಎಂಎಫ್ ಅಧಿಕಾರಿಗಳು ಹಾಗೂ ಮೂರು ಜಿಲ್ಲೆಗಳ ಹೈನುಗಾರರು ಪಾಲ್ಗೊಂಡು ಮೆರವಣಿಗೆಗೆ ಮತ್ತಷ್ಟು ಕಳೆ ತುಂಬಿದರು.

> ರೈತರು ಕೃಷಿ ಜತೆಗೆ ಹೈನುಗಾರಿಕೆಯನ್ನು ಉಪ ಕಸುಬಾಗಿ ಮಾಡಿಕೊಳ್ಳಬೇಕು. ಕೃಷಿಯಲ್ಲಿ ಏನಾದರೂ ಹಾನಿ ಆದರೆ, ಹೈನುಗಾರಿಕೆಯಲ್ಲಿ ಲಾಭ ಪಡೆದು ಆರ್ಥಿಕ ಸಂಕಷ್ಟದಿಂದ ಪಾರಾಗಲು ಅನುಕೂಲವಾಗಲಿದೆ. ಹೈನುಗಾರರನ್ನು ಉತ್ತೇಜಿಸುವ ಸಲುವಾಗಿ ವಿಜಯ ಕರ್ನಾಟಕ ಹಾಗೂ ದಾಮುಲ್ ಹಮ್ಮಿಕೊಂಡ ಪುರಸ್ಕಾರ ಸಮಾರಂಭ ಶ್ಲಾಘನೀಯ.
>
> **- ಜಗದೀಶ ಶೆಟ್ಟರ್** ಮಾಜಿ ಮುಖ್ಯಮಂತ್ರಿ

> ರೈತರು, ಹೈನೋದ್ಯಮಿಗಳ ಸಹಕಾರದಿಂದ ಧಾರವಾಡ ಹಾಲು ಒಕ್ಕೂಟ ಪ್ರಗತಿ ಪಥದತ್ತ ಸಾಗಿದೆ. ಉಳಿದ ಹಾಲಿನ ದರಕ್ಕಿಂತ ನಂದಿನಿ ಬ್ರ್ಯಾಂಡ್‌ನ ಬೆಲೆ ಕಡಿಮೆ ಇದೆ. ಹಾಗಾಗಿ ಸರಕಾರ ಒಪ್ಪಿಗೆ ಸೂಚಿಸಿದರೆ, ಇದನ್ನು ಹೆಚ್ಚಿಸಿ ಇದರಿಂದ ಬರುವ ಹೆಚ್ಚಿನ ಆದಾಯವನ್ನು ನೇರವಾಗಿ ಹೈನುಗಾರರಿಗೆ ಸಂದಾಯ ಮಾಡಲು ಚಿಂತಿಸಲಾಗಿದೆ.
>
> **- ಶಂಕರ ಮುಗದ**
> ಅಧ್ಯಕ್ಷರು, ಧಾರವಾಡ ಹಾಲು ಒಕ್ಕೂಟ

18-08-2022
V-Karnataka Pg 04

For more information visit
University Library Website
Web - uasbagrilibindia.org
E-mail- librarian@uasbangalore.edu.in

18-08-2022
V-Karnataka Pg 04

ತೇವಾಂಶ ಹೆಚ್ಚಳದಿಂದ ಎಲೆಚುಕ್ಕೆ ರೋಗ ಉಲ್ಬಣ | 23 ಜಿಲ್ಲೆಗಳ 10 ಲಕ್ಷ ಕುಟುಂಬಗಳಲ್ಲಿ ಮನೆಮಾಡಿದ ಆತಂಕ

ಅಕಾಲಿಕ ಮಳೆಯಿಂದ ಆಪತ್ತಿನಲ್ಲಿ ಸಿಲುಕಿದ ಅಡಕೆ ಬೆಳೆ

■ ಶಶಿಧರ್ ಎಸ್.ದೊಣಿಹಕ್ಲು,ತುಮಕೂರು
shashidara.ds@timesgroup.com

ರಾಜ್ಯದಲ್ಲಿ ಅಕಾಲಿಕ ಮಳೆಯಿಂದ ಅಡಕೆ ಬೆಳೆಗಾರರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಕೆಲವು ಜಿಲ್ಲೆಗಳಲ್ಲಷ್ಟೇ ಕಾಣಿಸಿಕೊಂಡಿದ್ದ ಎಲೆಚುಕ್ಕೆ ರೋಗವು ಮಳೆ ಹಾಗೂ ಶೀತ ವಾತಾವರಣದಿಂದಾಗಿ ರಾಜ್ಯಾದ್ಯಂತ ವ್ಯಾಪಿಸುತ್ತಿದೆ.

ಫಸಲು ಕೊಡುವ ಮರಗಳು ಮಾತ್ರವಲ್ಲದೆ ಪಾತಿಯಲ್ಲಿರುವ ಸಸಿಗಳಿಗೂ ರೋಗ ತಗುಲಿದೆ. ಕರಾವಳಿ, ಮಲೆನಾಡು ಸೇರಿದಂತೆ ಅಡಕೆ ಬೆಳೆಯುವ ಪ್ರಮುಖ ಪ್ರದೇಶಗಳಲ್ಲಿ ಕಳೆದ ವರ್ಷದ ಡಿಸೆಂಬರ್‌ನಲ್ಲಿಯೇ ಶುರುವಾದ ಮಳೆ ಈಗಲೂ ಮುಂದುವರಿದಿದೆ. ಅಡಕೆಗೆ ಅಗತ್ಯವಿರುವ ಪ್ರಮಾಣದ ಬಿಸಿಲು ಸಹ ಸಿಕ್ಕಿಲ್ಲ. ಹೀಗಾಗಿ ಈ ಅಕಾಲಿಕ ಮಳೆಯೇ ಎಲೆಚುಕ್ಕೆ ರೋಗಕ್ಕೆ ಪ್ರಮುಖ ಕಾರಣವಾಗಿದೆ. ಶಿಲೀಂಧ್ರ ಮತ್ತು ಬ್ಯಾಕ್ಟೀರಿಯಾಗಳಿಂದ ರೋಗ ತಗಲುತ್ತದೆ. ವಾತಾವರಣದಲ್ಲಿ ಉಂಟಾಗುವ ವ್ಯತ್ಯಯ, ಹೆಚ್ಚುವ ತೇವಾಂಶ ಮತ್ತು ರಸಗೊಬ್ಬರ ಬಳಕೆ ಅಸಮತೋಲನ ರೋಗಕ್ಕೆ ನಾಂದಿ.

ಅತಿ ಹೆಚ್ಚು ಅಡಕೆ ಬೆಳೆಯುವ ದಕ್ಷಿಣ ಕನ್ನಡ, ಚಿಕ್ಕಮಗಳೂರು, ಶಿವಮೊಗ್ಗ, ಕೊಡಗು ಜಿಲ್ಲೆಗಳಲ್ಲಿ ರೋಗ ಹೆಚ್ಚಿನ ಪ್ರಮಾಣದಲ್ಲಿ ಆವರಿಸಿದ್ದರೆ, ಉತ್ತರ ಕನ್ನಡದಲ್ಲಿಯೂ ಕೆಲವೆಡೆ ಕಾಣಿಸಿಕೊಂಡಿದೆ. ಬಯಲುಸೀಮೆಯಾದ ತುಮಕೂರಲ್ಲಿಯೂ ಶೀತ ವಾತಾವರಣದಿಂದ ಎಲೆಚುಕ್ಕೆ ರೋಗ ಹರಡುತ್ತಿದೆ. ಇತರೆ ಜಿಲ್ಲೆಗಳಲ್ಲೂ ರೋಗಾತಂಕ ಸೃಷ್ಟಿಯಾಗುತ್ತಿದೆ. ಎಲೆಚುಕ್ಕೆ ರೋಗದ ಜತೆಗೆ ಕೊಳೆರೋಗ, ಹಳದಿ ರೋಗ, ಹರಳು ಉದುರುವ ಸಮಸ್ಯೆ ಸೃಷ್ಟಿಯಾಗಿದೆ.

ಎಕರೆ ತೋಟದಲ್ಲಿ ಸರಾಸರಿ 1200 ಕೊನೆಗಳು ಬರುತ್ತಿದ್ದ ಜಾಗದಲ್ಲೀಗ ಹೆಚ್ಚೆಂದರೆ 500-600 ಕೊನೆಗಳು ಸಿಗುತ್ತವೆ. ಅವುಗಳು ಕೂಡ ಲಕ್ಕಷ್ಟೇ, ಕಾಯಿಗಳು ಕಡಿಮೆ ಮತ್ತು ರೋಗಪೀಡಿತವಾಗಿವೆ. ಹೀಗಾಗಿ ಅಡಕೆ ಬೆಳೆಗಾರರಿಗೆ ಜೀವನೋಪಾಯದ ಆತಂಕ ಶುರುವಾಗಿದೆ. ತುಮಕೂರು, ದಾವಣಗೆರೆ, ಹಾಸನ, ಮಂಡ್ಯ, ಮೈಸೂರು ಸೇರಿದಂತೆ ರಾಜ್ಯದ 23 ಜಿಲ್ಲೆಗಳಲ್ಲಿ ಅಡಕೆ ಬೆಳೆಯಲಾಗುತ್ತದೆ. ಸುಮಾರು 10 ಲಕ್ಷ ಕುಟುಂಬಗಳು ಅಡಕೆಯನ್ನೇ ಆಶ್ರಯಿಸಿವೆ.



2.15 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ರಾಜ್ಯದಲ್ಲಿ ಅಡಕೆ ಬೆಳೆಯಲಾಗುತ್ತಿದೆ.

70%: ಭಾರತದಲ್ಲಿ ಬೆಳೆಯುವ ಅಡಕೆ ಪೈಕಿ ಕರ್ನಾಟಕ, ಕೇರಳದ ಪಾಲು

> ಎಲೆಚುಕ್ಕೆ ರೋಗ ನಿಯಂತ್ರಣಕ್ಕೆ ಕ್ರಮಿಸಲಾಗುತ್ತಿದೆ. ಸಂಶೋಧನೆಗಳು ನಡೆಯುತ್ತಿವೆ. ಕೇಂದ್ರದ ತೋಟಗಾರಿಕಾ ತಜ್ಞರ ತಂಡ ಕೂಡ ಪರಿಶೀಲಿಸಲಿದೆ. ಬೆಳೆಗಾರರ ಜತೆಗೆ ಸರಕಾರ ಸದಾ ಇರಲಿದೆ.
>
> -ಆರಗ ಜ್ಞಾನೇಂದ್ರ ಅಡಕೆ ಟಾಸ್ಕ್‌ಫೋರ್ಸ್ ಅಧ್ಯಕ್ಷ

ಮಣ್ಣು ಪರೀಕ್ಷೆ ಆಧಾರದ ಮೇಲೆ ಪೋಷಕಾಂಶ ನೀಡಬೇಕು. ಶಿಫಾರಸು ಮಾಡಿದ ಪ್ರಮಾಣದಲ್ಲಿ ಸಮತೋಲದ ರಸಗೊಬ್ಬರ ನೀಡಬೇಕು. ಕೀಟಗಳ ನಿರ್ವಹಣೆಗೆ ಸೂಕ್ತ ಕ್ರಮದ ಅಗತ್ಯವಿದೆ. ಬಸಿಗಾಲುವೆ ನಿರ್ಮಿಸಬೇಕು. ಜೈವಿಕ ಗೊಬ್ಬರ ಬಳಕೆ ಮಾಡಬೇಕು. ತಪ್ಪದೇ ಔಷಧ ಸಿಂಪಡಣೆ ಮಾಡಬೇಕು.

-ಡಾ.ಕೆ.ಆರ್. ಶ್ರೀನಿವಾಸ್
ಸಸ್ಯರೋಗ ಶಾಸ್ತ್ರಜ್ಞ,ಕೃಷಿ ಸಂಶೋಧನಾ ಕೇಂದ್ರ, ಕುಣಿಗಲ್

ರೋಗದ ಲಕ್ಷಣ: ಅಡಕೆ ಹಿಡಲಿನ ಎಲೆಯ ಮೇಲೆ ಕಂದು ಆಥವಾ ಹಳದಿ ಬಣ್ಣದ ಚುಕ್ಕೆಗಳು ಕಾಣಿಸಿಕೊಂಡು, ನಂತರ ಇಡೀ ಮರಕ್ಕೆ ಹರಡುತ್ತದೆ. ಬಳಿಕ ಎಲೆಗಳು ಒಣಗುತ್ತವೆ. ರೋಗ ಬಾಧೆಯಿಂದ ಇಳುವರಿಗೆ ಹೊಡೆತ ಬೀಳುತ್ತದೆ. ಈ ರೋಗ ನಿಯಂತ್ರಣಕ್ಕೆ ತರುವುದು ಸುಲಭವಲ್ಲ.

ತಕ್ಷಣ ಏನು ಮಾಡಬೇಕು?

ಎಲೆಚುಕ್ಕೆ ರೋಗ ನಿಯಂತ್ರಣಕ್ಕೆ ಔಷಧ ಸಿಂಪಡಣೆ ತುರ್ತು ಅಗತ್ಯ. 1 ಲೀಟರ್ ನೀರಿಗೆ 2 ಗ್ರಾಂ ಕಾರ್ಬನ್ ಡೈಮಿಥೈ 1 ಲೀ ನೀರಿಗೆ 2 ಗ್ರಾಂ ಮ್ಯಾಂಕೋಜೆಬ್, 1 ಲೀ. ನೀರಿಗೆ 1 ಎಂಎಲ್ ಹೆಕ್ಸಾಕೊನಜೋಲ್, 1 ಲೀಟರ್ ನೀರಿಗೆ 1 ಗ್ರಾಂ ಕಾಪರ್ ಆಕ್ಸಿಕ್ಲೋರೈಡ್ ಇವುಗಳಲ್ಲಿ ಯಾವುದಾದರೊಂದು ಔಷಧ ಸಿಂಪಡಣೆ ಮಾಡಬೇಕು. ಇಲ್ಲವೇ 100 ಲೀಟರ್ ನೀರಿಗೆ 1 ಕೆ.ಜಿ. ಮೈಲುತುತ್ತ, 1 ಕೆ.ಜಿ.ಸುಣ್ಣ ಬೆರೆಸಿ ಸಿಂಪಡಿಸಬೇಕು.

PM Releases ₹16k cr for Farmers, Rolls Out 'One Nation One Fertiliser' Scheme

Our Bureau



New Delhi: Prime Minister Narendra Modi on Monday released ₹16,000 crore into the bank accounts of more than 85 million farmers across the country, in the 12th instalment of the Pradhan Mantri Kisan Samman Nidhi.

Over ₹2 lakh crore has already been transferred to the accounts of farmers to help them manage input costs, Modi said, adding that the amount would be directly credited into their accounts and that there "will be no mediators."

The initiative provides farmers up to ₹6,000 a year as minimum income support. The scheme was announced during the interim budget of 2019.

The prime minister also inaugurated 600 Kisan Samriddhi Kendras and the One Nation One Fertiliser Scheme at a conclave of farmers. Around 1,500 startups in the agricultural space also attended the event.

Addressing the gathering, Modi said steps were being taken to modernise agriculture and that the Kisan Samridhi Kendras would function as help centres for farmers in this process.

He said the government had since 2014 taken several successful steps towards self-sustenance in the production of urea. "Nano urea will help farmers address the issue of scarcity in urea," Modi said.

The prime minister said the fertilisers would be rebranded as "Bharat" to help farmers.

He also said more than 3,000 startups were functioning in the agriculture sector, and that they were changing the face of Indian agriculture.

"Innovations such as Kisan drones are changing the way of agriculture," he said.

18-08-2022
Times of Eco Pg 07

Wheat will be Sold in Open Mkt to Control Prices: Secy

Our bureau



New Delhi: India will sell wheat in the open market if there is a need to control prices, food secretary Sudhanshu Pandey on Monday, adding that the government has a comfortable stock position of wheat and rice in the central pool, even after meeting the requirements of the seventh phase of Pradhan Mantri Garib Kalyan Ann Yojana (PMGKAY).

"Even after meeting additional requirements of PMGKAY VII sufficient stock will be available in the central pool," Pandey said.

"We also have a surplus for market intervention if the need arises," the secretary added.

Addressing the concerns about the price rise of wheat he said that the rise in prices is in tune with the increase in the Minimum Support Price (MSP) of the food grain and the increase in other costs such as transportation etc.

International prices of wheat are ₹9-10 higher than domestic prices of the food grain, he said.

Only a part of Ukraine's wheat supply has reached the global market and the shortfall still continues, Pandey added.

18-08-2022
Vijayavani Pg 08

ಕೃಷಿ ತಂತ್ರಜ್ಞಾನದಿಂದ ಆರ್ಥಿಕತೆಗೆ ಬಲ

» ರಾಮಚಂದ್ರ ಹೆಬ್ಬಾರ್ ಅಭಿಮತ

» ಕೃತಕ ಬುದ್ಧಿಮತ್ತೆ ಕಾರ್ಯಾಗಾರ

ಯಶವಂತಪುರ: ಕೃಷಿ ವಲಯದಲ್ಲಿ ಉನ್ನತಿ ಸಾಧಿಸಲು ಹೊಸ ತಂತ್ರಜ್ಞಾನ, ಆವಿಷ್ಕಾರಗಳನ್ನು ಅಳವಡಿಸಿಕೊಂಡಾಗ ಮಾತ್ರ ರಾಷ್ಟ್ರ ಆರ್ಥಿಕ, ಸಾಮಾಜಿಕವಾಗಿ ಅಭಿವೃದ್ಧಿ ಹೊಂದುತ್ತದೆ ಎಂದು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ ಪ್ರಾದೇಶಿಕ ದೂರ ಸಂವೇದಿ ಕೇಂದ್ರದ (ದಕ್ಷಿಣ ವಿಭಾಗ) ಪ್ರಧಾನ ವ್ಯವಸ್ಥಾಪಕ ರಾಮಚಂದ್ರ ಹೆಬ್ಬಾರ್ ಹೇಳಿದ್ದಾರೆ.

ಉತ್ತರಹಳ್ಳಿ ಮುಖ್ಯರಸ್ತೆಯ ಜೆಎಸ್‌ಎಸ್ ಅಕಾಡೆಮಿ ಆಫ್ ಟೆಕ್ನಿಕಲ್ ಎಜುಕೇಷನ್ ಸಭಾಂಗಣದಲ್ಲಿ 'ಆರ್ಟಿ ಫಿಷಲ್ ಇಂಟಲಿಜೆನ್ಸ್ ಮತ್ತು ಮಷಿನ್ ಲರ್ನಿಂಗ್ ಟೆಕ್ನಿಕ್ಸ್ ಫಾರ್ ಪ್ರಿಸಿಷನ್ ಅಗ್ರಿಕಲ್ಚರ್' ವಿಷಯವಾಗಿ ಹಮ್ಮಿಕೊಂಡಿದ್ದ ಎರಡು ವಾರಗಳ ಅಧ್ಯಾಪಕರ ಅಭಿವೃದ್ಧಿ ಕಾರ್ಯಾಗಾರದಲ್ಲಿ ಮಾತನಾಡಿದರು.

ರೈತರು ಆರ್ಥಿಕವಾಗಿ ಸದೃಢರಾಗಲು ಅಗತ್ಯ ಸಾಲ, ಬೀಜ, ಗೊಬ್ಬರ, ಕೀಟನಾಶಕ ಜತೆಗೆ ಆಧುನಿಕ ಯಂತ್ರಗಳು ಒದಗಿಸಿದಾಗ ಉತ್ತಮ ಬೆಳೆ ಬೆಳೆಯಲು ಸಾಧ್ಯ ಎಂದರು.

ಜೆಎಸ್‌ಎಸ್ ಎಂವಿಪಿ ಮೈಸೂರಿನ ಜಂಟಿ ನಿರ್ದೇಶಕ ಡಾ. ಎಚ್.ಆರ್.ಮಹದೇವಸ್ವಾಮಿ, ಪ್ರಾಂಶುಪಾಲ ಡಾ.ಭೀಮಸೇನ ಸೋರೆಗಾಂವ್, ಡಾ.ಪ್ರಭುದೇವ್ ಜಗದೀಶ್ ಇತರರಿದ್ದರು.



ವಿಜಯವಾಣಿ ಚಿತ್ರ

ಜೆಎಸ್‌ಎಸ್‌ಐಟಿಯಲ್ಲಿ ಆಯೋಜಿಸಿದ್ದ ಕಾರ್ಯಾಗಾರವನ್ನು ರಾಮಚಂದ್ರ ಹೆಬ್ಬಾರ್ ಉದ್ಘಾಟಿಸಿದರು. ಮಹದೇವಸ್ವಾಮಿ, ಡಾ.ಭೀಮಸೇನ ಸೋರೆಗಾಂವ್ ಮತ್ತಿತರರಿದ್ದರು.

ರಸಗೊಬ್ಬರಕ್ಕೆ ಭಾರತ್ ಬ್ರ್ಯಾಂಡ್

ಒಂದು ದೇಶ ಒಂದು ರಸಗೊಬ್ಬರ ಯೋಜನೆಗೆ ಪ್ರಧಾನಿ ಚಾಲನೆ

■ ವಿಜಯವಾಣಿ ಸುದ್ದಿಜಾಲ ನವದೆಹಲಿ

'ಒಂದು ರಾಷ್ಟ್ರ ಒಂದು ರಸಗೊಬ್ಬರ' ಯೋಜನೆಗೆ ಪ್ರಧಾನಿ ನರೇಂದ್ರ ಮೋದಿ ಚಾಲನೆ ನೀಡಿದ್ದಾರೆ. ದೆಹಲಿಯ ಭಾರತೀಯ ಕೃಷಿ ಸಂಶೋಧನಾ ಸಂಸ್ಥೆಯಲ್ಲಿ ಏರ್ಪಡಿಸಲಾದ ಎರಡು ದಿನಗಳ ಪಿಎಂ ಕಿಸಾನ್ ಸಮ್ಮಾನ್ ಸಮ್ಮೇಳನ 2022 ಉದ್ಘಾಟನೆ ವೇಳೆ ಈ ಯೋಜನೆಗೆ ಚಾಲನೆ ನೀಡಲಾಗಿದೆ. ಸಮ್ಮೇಳನದಲ್ಲಿ 13,500ಕ್ಕೂ ಹೆಚ್ಚು ರೈತರು ಪಾಲ್ಗೊಂಡಿದ್ದರೆ, ಅಂದಾಜು 1500 ಕೃಷಿ ಸ್ಟಾರ್ಟಪ್‌ಗಳನ್ನು ಪರಿಚಯಿಸಲಾಗಿದೆ. ದೇಶದೆಲ್ಲೆಡೆಯಿಂದ ರೈತರು ಆನ್‌ಲೈನ್ ಮುಖಾಂತರ ಸಮ್ಮೇಳನದಲ್ಲಿ ಪಾಲ್ಗೊಳ್ಳುವ ಅವಕಾಶ ನೀಡಲಾಗಿದೆ. ಸಮ್ಮೇಳನ ಉದ್ದೇಶಿಸಿ ಮಾತನಾಡಿದ ಪ್ರಧಾನಿ, ಏಕರೂಪದ ಯೂರಿಯಾವನ್ನು ಒಂದೇ ಹೆಸರು ಮತ್ತು ಬ್ರ್ಯಾಂಡ್‌ನಲ್ಲಿ ಮಾರಾಟ ಮಾಡಲಾಗುತ್ತದೆ. ಇದು ಬ್ರ್ಯಾಂಡ್ ಭಾರತ್ ಆಗಲಿದೆ. ಈ ಮೂಲಕ ರೈತರಿಗೆ ಅಗ್ಗದ, ಉತ್ತಮ ಗುಣಮಟ್ಟದ ರಸಗೊಬ್ಬರ ಒದಗಿಸುವ ಯೋಜನೆ ಪ್ರಾರಂಭಿಸಲಾಗಿದೆ. ಇದರಿಂದ ರೈತರು ಎಲ್ಲ ರೀತಿಯ ಗೊಂದಲಗಳಿಂದ ಮುಕ್ತರಾಗಿ ಉತ್ತಮ ಗೊಬ್ಬರ ಪಡೆಯಲಿದ್ದಾರೆ. ಒಂದೇ ಬ್ರ್ಯಾಂಡಿಂಗ್‌ನಿಂದಾಗಿ ಕಂಪನಿಗಳ ನಡುವಿನ ಸ್ಪರ್ಧೆ ಕಡಿಮೆಯಾಗುತ್ತದೆ. ಇದು ದೇಶಾದ್ಯಂತ ಸಾಕಷ್ಟು ರಸಗೊಬ್ಬರಗಳ ಪೂರೈಕೆಯನ್ನು ಖಚಿತಪಡಿಸುತ್ತದೆ ಎಂದು ತಿಳಿಸಿದರು. ಈ ಯೋಜನೆ ಮೂಲಕ ಯೂರಿಯಾ, ಡಿ-ಅಮೋನಿಯಂ ಫಾಸ್ಫೇಟ್ (ಡಿಎಪಿ), ಮ್ಯೂರಿಯೇಟ್ ಆಫ್ ಪೊಟ್ಯಾಷ್ (ಎಂಒಪಿ) ಮತ್ತು ಎನ್‌ಪಿಕೆ ರಸಗೊಬ್ಬರಗಳನ್ನು ಬ್ರ್ಯಾಂಡ್ ಭಾರತ್‌ನ ಅಡಿಯಲ್ಲಿ ಮಾರಾಟ ಮಾಡಲು ಕೇಂದ್ರ ಮುಂದಾಗಿದೆ.

ನೀರಿನ ಸಂರಕ್ಷಣೆ, ಮಣ್ಣಿನ ಆರೋಗ್ಯ ಕಾಪಾಡಲು ಹನಿ ನೀರಾವರಿ ಮತ್ತು ಸ್ಪ್ರಿಂಕ್ಲರ್ ಬಳಕೆಗೆ ಸರ್ಕಾರ ಪ್ರಾಮುಖ್ಯತೆ ನೀಡುತ್ತಿದೆ. ನೈಸರ್ಗಿಕ ಕೃಷಿಗೆ ಆದ್ಯತೆ ನೀಡಿದ್ದು, ಉತ್ಪಾದನೆಯಲ್ಲಿ ಹಲವು ಪಟ್ಟು ಹೆಚ್ಚಳಕ್ಕೆ ಕಾರಣವಾಗಿದೆ. ರಸಗೊಬ್ಬರಗಳ ಉತ್ಪಾದನಾ ತಂತ್ರಜ್ಞಾನ, ಗುಣಮಟ್ಟದಲ್ಲಿ ಸಾಕಷ್ಟು ಬದಲಾವಣೆಯಾಗಿದೆ. ಇದು ಕೃಷಿ ಉತ್ಪನ್ನಗಳ ಉತ್ಪಾದನೆ ಉತ್ತೇಜಿಸುವುದಲ್ಲದೆ, ಎಲ್ಲ ಬೆಳೆ-ಸಂಬಂಧಿತ ಸಮಸ್ಯೆ ಪರಿಹರಿಸಲಿದೆ. ಭಾರತವು ಶೀಘ್ರದಲ್ಲೇ ಜಾಗತಿಕವಾಗಿ ಕೃಷಿ ಉತ್ಪನ್ನಗಳ ಸಮರ್ಥ ಉತ್ಪಾದನೆಯ ಕೇಂದ್ರವಾಗಿ ಹೊರಹೊಮ್ಮಲಿದೆ ಎಂದು ಭರವಸೆ ವ್ಯಕ್ತಪಡಿಸಿದರು.



ಪಿಟಿಐ

ಕಿಸಾನ್ ಸಮೃದ್ಧಿ ಕೇಂದ್ರ

ರಾಸಾಯನಿಕ, ರಸಗೊಬ್ಬರಗಳ ಸಚಿವಾಲಯದ ಅಡಿಯಲ್ಲಿ 600 ಪ್ರಧಾನಮಂತ್ರಿ ಕಿಸಾನ್ ಸಮೃದ್ಧಿ ಕೇಂದ್ರಗಳನ್ನೂ ಪ್ರಧಾನಿ ಮೋದಿ ಉದ್ಘಾಟಿಸಿದರು. ಈ ಯೋಜನೆಯಡಿಯಲ್ಲಿ ದೇಶದ ರಸಗೊಬ್ಬರ ಚಿಲ್ಲರೆ ಅಂಗಡಿಗಳನ್ನು ಹಂತ ಹಂತವಾಗಿ ಸಮೃದ್ಧಿ ಕೇಂದ್ರಗಳನ್ನಾಗಿ ಪರಿವರ್ತಿಸಲಾಗುತ್ತದೆ. ಇದು ರೈತರ ವಿವಿಧ ರೀತಿಯ ಅಗತ್ಯಗಳನ್ನು ಪೂರೈಸಲಿದ್ದು, ಕೃಷಿಗೆ ಅಗತ್ಯವಾಗಿರುವ ಗೊಬ್ಬರ, ಬೀಜ, ಉಪಕರಣಗಳನ್ನು ಒದಗಿಸುತ್ತದೆ. ಮಣ್ಣು, ಬೀಜ ಮತ್ತು ರಸಗೊಬ್ಬರಗಳ ಪರೀಕ್ಷಾ ಸೌಲಭ್ಯಗಳು, ರೈತರಲ್ಲಿ ಜಾಗೃತಿ ಮೂಡಿಸುವುದು, ವಿವಿಧ ಸರ್ಕಾರಿ ಯೋಜನೆಗಳ ಬಗ್ಗೆ ಮಾಹಿತಿ ನೀಡಿ, ಬ್ಲಾಕ್/ಜಿಲ್ಲಾಮಟ್ಟದ ವೇದಿಕೆಗಳಲ್ಲಿ ಚಿಲ್ಲರೆ ವ್ಯಾಪಾರಿಗಳ ನಿಯಮಿತ ಸಾಮರ್ಥ್ಯ ವೃದ್ಧಿಯನ್ನು ಖಚಿತಪಡಿಸಿಕೊಳ್ಳುವುದಕ್ಕೆ ಮಹತ್ವ ಕೊಡಲಿದೆ. 3.3 ಲಕ್ಷಕ್ಕೂ ಹೆಚ್ಚು ಚಿಲ್ಲರೆ ರಸಗೊಬ್ಬರ ಅಂಗಡಿಗಳನ್ನು ಕಿಸಾನ್ ಸಮೃದ್ಧಿ ಕೇಂದ್ರಗಳನ್ನಾಗಿ ಪರಿವರ್ತಿಸಲು ಯೋಜಿಸಲಾಗಿದೆ. ಕೇಂದ್ರಗಳು ಕೇವಲ ರಸಗೊಬ್ಬರದ ಮಾರಾಟ ಕೇಂದ್ರಗಳಾಗಿರದೆ ದೇಶದ ರೈತರೊಂದಿಗೆ ಆಳವಾದ ಬಾಂಧವ್ಯವನ್ನು ಸ್ಥಾಪಿಸುವ ಕಾರ್ಯವಿಧಾನವಾಗಿದೆ ಎಂದು ಪ್ರಧಾನಿ ಹೇಳಿದ್ದಾರೆ.

ಕಿಸಾನ್ ಸಮ್ಮಾನ್ 12ನೇ ಕಂತು ಬಿಡುಗಡೆ

ನವದೆಹಲಿ: ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಯೋಜನೆಯ 12ನೇ ಕಂತಿನ 16,000 ಕೋಟಿ ರೂ.ಗಳನ್ನು ಪ್ರಧಾನಿ ನರೇಂದ್ರ ಮೋದಿ ಸೋಮವಾರ ಬಿಡುಗಡೆ ಮಾಡಿದರು. ಇದರಿಂದ ಅಂದಾಜು 11 ಕೋಟಿ ರೈತರಿಗೆ ನೆರವಾಗಲಿದ್ದು, ಅವರ ಬ್ಯಾಂಕ್ ಖಾತೆಗಳಿಗೆ ಹಣವನ್ನು ವರ್ಗಾಯಿಸಲಾಗಿದೆ. ಇದರಿಂದಾಗಿ ದೀಪಾವಳಿ ಮತ್ತು ಹಿಂಗಾರು ಬಿತ್ತನೆ ಋತುವಿನಲ್ಲಿ ರೈತರ ಮೊಗದಲ್ಲಿ ನಗು ಮೂಡಿದೆ. 12ನೇ ಕಂತಿನೊಂದಿಗೆ ಈ ಯೋಜನೆಯಡಿ ಒಟ್ಟು 2.16 ಲಕ್ಷ ಕೋಟಿ ರೂಪಾಯಿಗೂ ಹೆಚ್ಚು ಮೊತ್ತವನ್ನು ರೈತರಿಗೆ ಬಿಡುಗಡೆ ಮಾಡಿದಂತಾಗಿದೆ.

ದೀಪಾವಳಿ ಮುನ್ನ ಹಣ ಖಾತೆಗೆ: ಯಾವುದೇ ಮಧ್ಯವರ್ತಿಗಳ ಹಸ್ತಕ್ಷೇಪವಿಲ್ಲದೆ ಕಿಸಾನ್ ಸಮ್ಮಾನ್ ನಿಧಿ ನೇರವಾಗಿ ರೈತರ ಖಾತೆಗಳಿಗೆ ಹಣ ತಲುಪುತ್ತಿದೆ. ಕೋಟ್ಯಂತರ ರೈತ ಕುಟುಂಬಗಳಿಗೆ ಒಟ್ಟು 16,000 ಕೋಟಿ ರೂ. ಮೊತ್ತ ಬಿಡುಗಡೆ ಮಾಡಲಾಗಿದ್ದು. ದೀಪಾವಳಿಯ ಮೊದಲು ರೈತರಿಗೆ ತಲುಪಲಿದೆ ಎಂದು ಪ್ರಧಾನಿ ಹೇಳಿದ್ದಾರೆ.





18-08-2022
Vijayavani Pg 02

ಪ್ರತಿ ಕೆ.ಜಿ ಟೊಮೆಟೊ ದರ ರೂ.70 ರಿಂದ 80ರ ಅಸುಪಾಸು

ಕುಸಿದ ಇಳುವರಿ, ಹೆಚ್ಚಿದ ಬೇಡಿಕೆ

ದೇವನಹಳ್ಳಿ: ಜಿಲ್ಲೆಯಾದ್ಯಂತ ಕಳೆದ ತಿಂಗಳು ಸುರಿದ ಭಾರಿ ಮಳೆಯ ಪರಿಣಾಮ ಟೊಮೆಟೊ ಬೆಳೆಯಲ್ಲಿ ಫಸಲು ಕುಂಠಿತವಾಗಿ ಭಾರೀ ಪ್ರಮಾಣದಲ್ಲಿ ಇಳುವರಿ ಕಡಿಮೆಯಾಗಿದೆ. ಮಾರುಕಟ್ಟೆಯಲ್ಲಿ ಟೊಮೆಟೊಗೆ ಬೇಡಿಕೆ ಹೆಚ್ಚಾಗುತ್ತಿದ್ದು, ಅದಕ್ಕೆ ತಕ್ಕಂತೆ ಪೂರೈಕೆಯಾಗದ ಕಾರಣ ಪ್ರತಿ ಕೆ.ಜಿ ಟೊಮೆಟೊಗೆ 70 ರಿಂದ 80ರ ಅಸುಪಾಸು ದರ ನಿಗದಿಯಾಗುತ್ತಿದೆ. ಇನ್ನಷ್ಟು ಬೆಲೆ ಏರುವ ಸಾಧ್ಯತೆಯಿದೆ. ಟೊಮೊಟೊ ಬೆಳೆಯನ್ನು ಹೆಚ್ಚಾಗಿ ಬೆಳೆಯುವ ಬಯಲು ಸೀಮೆ ಪ್ರದೇಶಗಳಾದ ಕೋಲಾರ, ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ಪ್ರತಿ ವರ್ಷ ನೂರಾರು ಹೆಕ್ಟರ್ ಪ್ರದೇಶದಲ್ಲಿ ಟೊಮೆಟೊ ಬೆಳೆದು ದೇಶ, ವಿದೇಶಗಳಿಗೆ ರಫ್ತನ್ನೂ ಮಾಡಲಾಗುತ್ತದೆ. ಆದರೆ ಈ ಮೂರು ಜಿಲ್ಲೆಗಳಲ್ಲಿ ಬೇಡಿಕೆಗೆ ತಕ್ಕಂತೆ ಪೂರೈಕೆ ಇಲ್ಲದ ಕಾರಣ ಟೊಮೊಟೊಯ ದರ ದಿನದಿಂದ ದಿನಕ್ಕೆ ಹೆಚ್ಚಾಗುತ್ತಲೇ ಇದೆ.



ಬೀದಿ ಪಾಲಾಗಿದ್ದ ಟೊಮೊಟೊ: ಈಗಿನ ಪರಿಸ್ಥಿತಿಗೆ ವ್ಯತಿರಿಕ್ತವಾಗಿ ಜುಲೈ, ಆಗಸ್ಟ ತಿಂಗಳಿನಲ್ಲಿ ಅಧಿಕ ಇಳುವರಿಯ ಕಾರಣದಿಂದ ಮಾರುಕಟ್ಟೆಯಲ್ಲಿ ನಿರೀಕ್ಷಿತ ಬೆಲೆ ದೊರೆಯದ ಕಾರಣಕ್ಕಾಗಿ ತೋಟಗಳಲ್ಲಿನ ಟೊಮೊಟೊವನ್ನು ಕಿತ್ತು ರಸ್ತೆಗಳಲ್ಲಿ ಸುರಿಯಲಾಗಿತ್ತು.

ಆದರೆ, ಸೆಪ್ಟೆಂಬರ್, ಅಕ್ಟೋಬರ್ ತಿಂಗಳಲ್ಲಿ ಉತ್ತಮ ಬೆಲೆ ಸಿಗುತ್ತಿದ್ದರೂ ಆದಕ್ಕೆ ತಕ್ಕಂತೆ ಖರೀದಿಸಲು ಇಲ್ಲ. ಕೊಯ್ಲಿಗೆ ಬರುವಂತ ಬೆಳೆಯೂ ಇನ್ನೂ ತೋಟಗಳಲ್ಲಿ ಇದ್ದು, ಅಗೊಮ್ಮೆ ಹೆಚ್ಚು ಇಳುವರಿಯಾದರೇ ಪುನಃ ಬೆಲೆ ಕುಸಿತವಾಗಬಹುದು.

ನೆಲಕಚ್ಚಿದ ಇಳುವರಿ: ಪ್ರತಿ ವರ್ಷದಂತೆ ಬಾರಿಯೂ ಜಿಲ್ಲೆಯಾದ್ಯಂತ ಟೊಮೆಟೊ ಬೆಳೆಯನ್ನು ಸಾಕಷ್ಟು ಸಂಖ್ಯೆಯ ರೈತರು ಬೆಳೆದಿದ್ದರು. ಟೊಮೆಟೊ ಗಿಡದಲ್ಲಿ ಹೂ. ಪಿಂದೆ (ಸಣ್ಣ ಕಾಯಿ) ಬಿಡುವ ಸಮಯದಲ್ಲಿ ಸುರಿದ ಭಾರಿ ಪ್ರಮಾಣದ ಮಳೆಯಿಂದ ಹೂ, ಸಣ್ಣ ಕಾಯಿ ನೆಲ ಕಚ್ಚಲು ಕಾರಣವಾಯಿತು. ಇದರಿಂದ ಗಿಡದಲ್ಲಿ ನಿರೀಕ್ಷಿತ ಪ್ರಮಾಣದ ಟೊಮೆಟೊ ಬಾರದ ಕಾರಣ, ಬೆಳೆಯ ಮೇಲೆ ಪ್ರತಿಕೂಲ ಪರಿಣಾಮ ಬೀರಿ, ಪ್ರತಿ ಹೆಕ್ಟೇರ್‌ಗೆ ನಾಲ್ಕು ಟನ್ ಸಿಗುವ ಸ್ಥಳದಲ್ಲಿ ಕೇವಲ 1 ರಿಂದ 1.5 ಟನ್ ನಷ್ಟೇ ಬೆಳೆ ಸಿಗುತ್ತಿದೆ.

ನೆರೆ ರಾಜ್ಯದಿಂದ ಆಮದಾಗುತ್ತಿಲ್ಲ

ರಾಜ್ಯಕ್ಕೆ ನೆರೆಯ ಮಹಾರಾಷ್ಟ್ರದ ನಾಸಿಕ್ ಸೇರಿದಂತೆ ಇತರೇ ಭಾಗದಿಂದ ಟೊಮೆಟೊ ಪೂರೈಕೆಯಾಗುತ್ತಿತ್ತು. ಆ ಭಾಗದಲ್ಲಿ ಸಹ ಹೆಚ್ಚು ಮಳೆಯಾದ ಹಿನ್ನಲೆಯಲ್ಲಿ ರಾಜ್ಯಕ್ಕೂ ಟೊಮೆಟೊ ಪೂರೈಕೆ ಕಡಿಮೆಯಾಗಿದೆ. ಇದರಿಂದ ಜಿಲ್ಲೆಯ ಟೊಮೆಟೊ ಬೆಳೆಗಾರರ ಮೇಲೆ ವ್ಯಾಪಾರಸ್ಥರು ಕಣ್ಣಿಟ್ಟಿದ್ದಾರೆ. ಸ್ಥಳೀಯ ರೈತರು ಹತ್ತಿರದ ಮಾರುಕಟ್ಟೆಯಲ್ಲಿ ಟೊಮೊಟೆ ಪೂರೈಕೆ ಮಾಡುವುದರಿಂದ ಬಂದ ವೇಗದಲ್ಲಿ ಖಾಲಿಯಾಗುತ್ತಿದೆ.

ಬೆಲ್ಲರೆ ಅಂಗಡಿಗಳಲ್ಲಿ ದುಬಾರಿ

ಪಟ್ಟಣಗಳಲ್ಲಿ, ಸಂತೆಯಲ್ಲಿ ಹಾಗೂ ಚಿಲ್ಲರೆ ಅಂಗಡಿಗಳಲ್ಲಿ ಬೆಲೆ ಹೆಚ್ಚಾಗಿದೆ. ಅಲ್ಪ ಪ್ರಮಾಣದ ಟೊಮೆಟೊಗೆ ಹೆಚ್ಚಿನ ಬೆಲೆ ತೆತ್ತು ಖರೀದಿ ಮಾಡುವ ಸ್ಥಿತಿಗೆ ಗ್ರಾಹಕರು ಹೊಂದಿಕೊಳ್ಳಬೇಕಿದೆ. ಬಿಸಾಡುವಂತಿರುವ ಟೊಮೆಟೊಗಳನ್ನು ಕ್ರೇಟ್‌ಗಳಲ್ಲಿ ಇಟ್ಟು ಮಾರಾಟ ಮಾಡುತ್ತಿರುವ ದೃಶ್ಯಗಳು ಕಂಡು ಬರುತ್ತಿದೆ.

18-08-2022
Hosadiganta Pg 08